ಕುಮುದಾ ಪುರುಷೋತ್ತಮ್

# ಆಟೋಗ್ರಾಫ್

ಅಂದು ನಮ್ಮ ಶಾಲೆಯಲ್ಲಿ ಪದ್ಯಪಠಣ ಸ್ಪರ್ಧೆ ಇತ್ತು. ಕ್ಲಾಸ್‌ಟೀಚರ್ ಕೊಟ್ಟಿದ್ದ ಹದಿನಾಲ್ಕುಸಾಲಿನ ಪದ್ಯವನ್ನು ಕಂಠಪಾಠ ಮಾಡಿ ಒಪ್ಪಿಸಬೇಕಿತ್ತು. ಸ್ಪರ್ಧೆಯ ದಿನ ಸಡ್ಡುಹೊಡೆದು ಬಂದವರೆಲ್ಲಾ ಎರಡೋ ಮೂರೋ ಹೆಚ್ಚೆಂದರೆ ನಾಲ್ಕುಸಾಲು ಹೇಳಿ ಮುಂದೆ ಮರೆತು ಬ್ಬೆ ಬ್ಬೆ ಬ್ಬೆ ಮಾಡಿ ಹಿಂದಿರುಗಿದ್ದರು. ನಾನು ಮಾತ್ರ ಆರುಸಾಲು ಹೇಳಿ ಬಳಿಕ ಬ್ಬೆ ಬ್ಬೆ ಮಾಡಿ ಇಳಿದುಬಂದಿದ್ದೆ. ನಾಲ್ಕಕ್ಕಿಂತ ಆರು ಜಾಸ್ತಿ ತಾನೇ? ಬೇರೆ ದಾರಿಕಾಣದ ತೀರ್ಪುಗಾರರು ನನಗೇ ಮೊದಲ ಬಹುಮಾನ ನೀಡಿ 'ಅಂಧರ ರಾಜ್ಯದಲ್ಲಿ ಒಕ್ಕಣ್ಣನೇ ಆಳರಸ' ಎಂಬುದನ್ನು ನಿರೂಪಿಸಿಬಿಟ್ಟಿದ್ದರು!

ವಾರ್ಷಿಕೋತ್ಸವದ ದಿನ ಒಂದು ಪುಟ್ಟದಾದ ಆದರೆ ಬಲು ಆಕರ್ಷಕವಾದ ಪುಸ್ತಕ ಬಹುಮಾನವಾಗಿ ಬಂದಿತ್ತು. ಸುಂದರವಾದ ಹೊರಕವಚ, ಒಳಗೆ ಕಾಮನಬಿಲ್ಲಿನ ರಂಗುರಂಗಿನ ಪುಟಗಳು. ಕ್ಲಾಸ್‌ಟೀಚರ್ ಬಳಿಹೋಗಿ ಇದೇನು ಎಂದು ಕೇಳಿದ್ದೆ. ಆಟೋಗ್ರಾಫ್ ಪುಸ್ತಕವೆಂದಿದ್ದರು.

'ಹಾಗೆಂದರೆ?' ನನ್ನ ಅಜ್ಞಾನ ಮಿತಿಮೀರಿತ್ತು.

'ಆಟೋಗ್ರಾಫ್ ಎಂದರೆ ಹಸ್ತಾಕ್ಷರ ಪಡೆದುಕೊಳ್ಳುವ ಪುಸ್ತಕ.'

'ಯಾರ್‍ಯಾರದೋ ಹಸ್ತಾಕ್ಷರವೇಕೆ ಪಡೆದುಕೊಳ್ಳಬೇಕು?'

'ಯಾರ್‍ಯಾರದ್ದೋ ಅಲ್ಲ. ಬಹಳ ಶ್ರಮಪಟ್ಟು ಸಾಧನೆಮಾಡಿ ಕೀರ್ತಿಗಳಿಸಿದ ವ್ಯಕ್ತಿಗಳಿಂದ ಹಸ್ತಾಕ್ಷರ ಪಡೆದಿಟ್ಟುಕೊಂಡಿದ್ದರೆ ಅದನ್ನು ನೋಡಿದಾಗಲೆಲ್ಲಾ ನಮಗೆ ಸ್ಫೂರ್ತಿಯುಕ್ಕಿ ನಾವೂ ಅವರಂತೆ ಸ್ವಲ್ಪವಾದರೂ ಎತ್ತರಕ್ಕೇಳಬಹುದು. ನಿನ್ನ ಹಸ್ತಾಕ್ಷರ ಶೇಖರಣೆ ಯಶಸ್ವಿಯಾಗಲಿ' ಎಂದು ಹರಸಿದರು.

ಶ್ರಮಪಡುವವರೆಂದರೆ ಯಾರು? ಸಾಧನೆ ಮಾಡಿದವರನ್ನು ಎಲ್ಲೆಂದು ಹುಡುಕುವುದು? ಯಾರಿಗೆ ಕೀರ್ತಿ ದೊರಕಿದೆ? ಯೋಚಿಸಿಯೋಚಿಸಿ ತಲೆ ಕೆಟ್ಟು ಕುಲಗೆಟ್ಟು ಹೋಗಿತ್ತು.

ಆ ಸಮಯಕ್ಕೆ ಸರಿಯಾಗಿ ಆ ವರ್ಷದ ಎಸ್ಸೆಸ್ಸೆಲ್ಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾಯ್ತು. ನನ್ನ ಅಣ್ಣ ಜಂಭದ ಕೋಳಿಯ ರೀತಿಯಲಿ ನನ್ನಮ್ಮನ ಬಳಿ ಬಂದ. 'ಯಾವಾಗ್ಲೂ ನಾನು ಸರ್‍ಯಾಗಿ ಓದೋಲ್ಲ ನಾಲಾಯಕ್ಕು ಅಂತ ಬೈತೀರ್ಯಲ್ಲಾ. ಈಗ್ನೋಡು. ಒಂದೇ ಸಲಕ್ಕೆ ಪಾಸ್ಮಾಡಿದ್ದೇನೆ. ನನಗೆ ಹೋಲಿಸಿ ಒಳ್ಳೇ ಹುಡ್ಗ ಅಂತ ಹೊಗಳ್ತಾ ಇರ್ತೀಯಲ್ಲ ಆ ಗುಂಡಣ್ಣ ಎಂಟನೇಸಲ ಫೇಲಾಗಿದಾನೆ! ಅದು ನಮ್ಮ ಶಾಲೆಗೇ ದಾಖಲೇನಂತೆ. ಅವಂದು ಬಲು ದೊಡ್ಡ ಸಾಧನೆ ಅಂತ ಮೇಷ್ಟ್ರುಗಳು ಸ್ಟಾಫ್ ರೂಮಿನಲ್ಲಿ ನಗೆಯಾಡ್ತಿದ್ರು' ಎಂದ.

